ROTARY CLUB OF MOODBIDRI
Celebrating... 57th year of service

Rotary

THE MAGIC OF ROTARY

# ROTADRI

Monthly Bulletin of Rotary Club of Moodbidri

ISSUE - 2 | R.I. Dist 3181 / Zone IV / Charter No.: 15739 | AUGUST - 2024

## ರಾಷ್ಟ್ರ ಚಿಂತನ - ಭ್ರಾತೃ ಬಂಧನ
## ಸ್ವಾತಂತ್ರ್ಯ ದಿನ - ರಕ್ಷಾಬಂಧನ








**ಅನುದಿನ ನೆನೆ ಸ್ವಾತಂತ್ರ್ಯದ ಕೊಡುಗೆ - ಪ್ರತಿದಿನ ಹೊಸೆ ಭ್ರಾತೃತ್ವದ ಒಸಗೆ**

## ಈ ಸಂಚಿಕೆಯಲ್ಲಿ



ಮೂಡುಬಿದಿರೆ ರೋಟರಿ ಕ್ಲಬ್ಬಿನ ಸ್ಥಾಪಕ ಸದಸ್ಯರಾದ
**ದಿವಂಗತ ಕೆ. ಅಮರನಾಥ ಶೆಟ್ಟಿ**
ಇವರ
**ಮರೆಯಲಾಗದ ನೆನಪು**

### ಮುಖಪುಟದಲ್ಲಿ



Samprith | Rishika



Viaan Pai | Divya

ವಿನ್ಯಾಸ:
www.sigma-graphics.com

ಮುದ್ರಣ:
ಸೋನಿ ಪ್ರಿಂಟರ್ಸ್, ಮೂಡುಬಿದಿರೆ

- Presidents Desk
- ಸ್ವಾತಂತ್ರ್ಯದ ಸವಿಗಾನ
- ಈ ಬಂಧನ.... ರಕ್ಷಾ ಬಂಧನ
- Rotary Quiz & More

## EDITORIAL BOARD

**Rtn. Ganesh Kamath**
Co - editor

**Rtn. Sunil**
Member

**S N Borker**
Member

**Rtn. Dr. Samarth Bhat**
Member

## ಸಂಪಾದಕೀಯ

# ಸಾಧಿಸುವ ಹಂಬಲ ಮುನ್ನಡೆಗೆ ಬೆಂಬಲ

### ನಿಲ್ಲಲಿ ಮುನಿಸಿನ ಕಥೆ

ಸಣ್ಣನೆ ತಣ್ಣಗೆ ಸುರಿಯುತ್ತಿದ್ದ ಸೋನೆ ಮಳೆ ಪಥ ಬದಲಾಯಿಸಿದೆ. ಮಳೆಯ ಆರ್ಭಟಕ್ಕೆ ಮನುಜ ಕುಲ ತತ್ತರಿಸಿದೆ. ಶಿರೂರು ಮತ್ತು ದೇವರನಾಡಿನಲ್ಲಿ ಭೀಕರ ದುರಂತ ಪ್ರಕೃತಿಯು ಎದುರು ನಾವೆಷ್ಟು ಸಣ್ಣವರೆಂದು ತೋರಿಸುತ್ತಿದೆ. ಮೃತರಿಗೆ, ಗಾಯಾಳುಗಳಿಗೆ ಹಾಗೂ ನೋವುಂಡವರಿಗೆ ಹೃದಯಾಂತಾ–ರಳದ ಸಾಂತ್ವನ. ದೇವರೇ ನಿಲ್ಲಿಸು ನಿನ್ನ ಮುನಿಸಿನ ಕಥೆಯ.

### ಅರ್ಥಪೂರ್ಣ ಆರಂಭ

ಮಳೆಯ ಶುಭ ಸೇಸೆಯೊಂದಿಗೆ ಅಧಿಕಾರ ಸ್ವೀಕರಿಸಿದ ನೂತನ ತಂಡ ಸುಂದರ ಪದಗ್ರಹಣ ಕಾರ್ಯಕ್ರಮವೊಂದನ್ನು ನೀಡಿ ಆರಂಭಿಕ ಮುನ್ನಡೆ ಸಾಧಿಸಿದೆ. ಮುಂಬರುತ್ತಿರುವ ವಿಸ್ತಾರ ಸಮಾವೇಶದ ಯಶಸ್ವಿಗೆ ಸಮರ್ಪಣ ಮನೋಭಾವದಿಂದ ಭಾಗವ–ಹಿಸುತ್ತಿರುವ ನಮ್ಮ ಕ್ಲಬ್‌ನ್ನು ಕಂಡಾಗ ಈ ಬಾರಿ ಉತ್ತಮ ರನ್ ಗಳಿಸುವುದರಲ್ಲಿ ಸಂಶಯವಿಲ್ಲ.

### ಭಾರತಾಂಬೆಯೇ ಜನಿಸಿ ನಿನ್ನೊಳು

ಮತ್ತೆ ಬಂದಿದೆ ಸ್ವಾತಂತ್ರ್ಯೋತ್ಸವ ಸಂಭ್ರಮ, ಸಡಗರ. ದಾಸ್ಯದ ಸಂಕೋಲೆಯಿಂದ ಮುಕ್ತಳಾದ ತಾಯಿ ಭಾರತೀಯ ಜನ್ಮದಿನ. 1947 ಆ.15ರ ಸ್ವಾತಂತ್ರ್ಯೋತ್ಸವವನ್ನು ಕಂಡು ಅನುಭವಿಸಿದ ಹಿರಿಯರ ಸಿಹಿ ಸವಿ ನೆನಪುಗಳನ್ನು ಹಂಚಿ–ಕೊಳ್ಳುತ್ತಿದ್ದೇವೆ.

### ಒಂದು ಗಂಟು ನೂರೊಂದು ನಂಟು

ರಕ್ಷಾ ಬಂಧನ ಎಂಬುವುದು ಭಾರತೀಯತೆಯ ಭಾವನಾತ್ಮಕ ಉತ್ಸವ. ಜಗತ್ತಿನ ಸಾಂಸ್ಕೃತಿಕ ಮೆರುಗಿಗೆ, ಭಾರತ ನೀಡಿದ ಅಪೂರ್ವ ಕೊಡುಗೆ. ಹಾಗಂತ ಭ್ರಾತೃತ್ವವೇ ರೋಟರಿಯ ಮೂಲ ಮಂತ್ರ. ಸಹೋದರತ್ವ ಸಾರುವ ರಕ್ಷಾಬಂಧನದ ಸಂದೇಶ ಈ ಬಾರಿಯ ವಿಶೇಷ.

ಭಾರತೀಯ ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಪದಕ ನಗೆ ಬೀರುವ ಹೊತ್ತು ಅವರಿಗೆ ಅಭಿನಂದನೆ ಸಲ್ಲಿಸುತ್ತಾ, **ಸ್ವಾತಂತ್ರ್ಯ ದಿನದ ಹಾಗೂ ರಕ್ಷಾ ಬಂಧನದ ಶುಭಾಶಯಗಳು.**



– ರೊ. ರಾಮಚಂದ್ರ ಮಿಜಾರ್

+91 98452 43208
editorrotadri@gmail.com

THE MAGIC OF ROTARY

## Welcome to August Membership and New Club Development Month




Dear Rotarians,

Welcome to August, the special month dedicated to Membership and New Club Development. This is a time when Rotary Clubs around the world focus on growing their membership and creating new clubs.

I want to thank each one of you for your contributions, timely payment of dues, and active participation in our various projects. Your hard work and support made our installation program a big success.

As you all know, our club is hosting the district membership development, retention, and public image seminar 'VISTARA' on Saturday, August 10, 2024, at 4:00 PM at Kandiga Greens Auditorium, Belvai. We need the support of all our members to make this event a great success. Your participation and enthusiasm will be crucial in showcasing our club's commitment to Rotary's values and goals.

Let's use this opportunity to invite new members to the seminar from around our District and Zone. By bringing in more members, we can increase our impact and achieve even more. Talk to your friends, family, and colleagues about Rotary and the good work we do. Encourage them to join us and be part of our mission to make a positive difference in our community.

Together, we can continue to grow and make a difference. Let's make this month a great one for our club and for Rotary.

Yours in Rotary Service,

Warm regards,

**Rtn. U. Raviprasad Upadhyaya**

President

**WE MEET EVERY MONDAY**
**@ 7.30 pm**
**ROTARY SAMMILANA HALL, MOODBIDRI**

**IF IT'S MONDAY**
**IT MUST BE ROTARY!**



# ಅಮರ ಶಿಲ್ಪಿ ಅಮರನಾಥ ಶೆಟ್ಟಿ

## ಇವರೊಂದಿಗಿನ ಸವಿನೆನಪುಗಳು

ನನ್ನ ಎಳವೆಯಿಂದಲೇ ಅಮರನಾಥ ಶೆಟ್ಟರ ಸಾನಿಧ್ಯ ದೊರಕಿತ್ತು. ನನ್ನ ವಿದ್ಯಾಭ್ಯಾಸದ ಕಾಲದಲ್ಲಿಯು ಬಹಳ ಆತ್ಮೀಯ ವ್ಯಕ್ತಿ ಆಗಿದ್ದರು. ಅಮರನಾಥ ಶೆಟ್ಟರು ಮುಂದೆ ಮೂಡಬಿದ್ರೆ ರೋಟರಿಯ 2 ಬಾರಿ ಅಧ್ಯಕ್ಷ ಸ್ಥಾನವನ್ನು ವಹಿಸಿ ರೋಟರಿಯ ಸರ್ವಾಂಗೀಣ ಬೆಳವಣಿಗೆಗೆ ಕಾರಣರಾಗಿದ್ದರು. 1982ರಲ್ಲಿ 2ನೇ ಬಾರಿ ಅಧ್ಯಕ್ಷರಾಗಿದ್ದಾರೆ. ನಾನು ಕಾರ್ಯದರ್ಶಿ ಆಗಿದ್ದೆ. ಅಮರಣ್ಣನಿಗೆ ಎಲ್ಲಿ ಹೋದಲ್ಲಿ ಅಧ್ಯಕ್ಷ ಪದವಿ ಸಿಗುತ್ತಿತ್ತು. ನಿಮ್ಮ ಕಾರ್ಯದರ್ಶಿ ಯಾರೆಂಬ ಪ್ರಶ್ನೆಗೆ ಕೂಡಲೇ ಅವರಲ್ಲಿ ಉತ್ತರ ಬರುತ್ತಿತ್ತು ನನ್ನ ಹೆಸರು. 1982ರಲ್ಲಿ ನಮ್ಮ ರೋಟರಿಯ ಜಿಲ್ಲೆಯ ಅತೀ ದೊಡ್ಡ ಕನಸು ನಾವು ಆರಂಭ ಮಾಡಿದ ರೋಟರಿ ಇಂಗ್ಲೀಷ್ ಮೀಡಿಯಂ ಶಾಲೆ. ಶಾಲೆಗೆ ಬೇಕಾದ ಜಾಗದ ವ್ಯವಸ್ಥೆ ಅವರ ವತಿಯಿಂದಲೇ ಆಯಿತು. ಜೂನ್ ತಿಂಗಳಲ್ಲಿ ಶಾಲೆಯ ಆರಂಭೋತ್ಸವವು ಜರಗಿತು. 32,000/– ವೆಚ್ಚದಲ್ಲಿ 1982ರಲ್ಲಿ ನಾನು ಕೈಯಿಂದ ಹಣ ಹಾಕಿ ಒಂದು ಬಿಲ್ಡಿಂಗ್ ಕಟ್ಟಿಸಿದೆವು. ಅದರ ಉದ್ಘಾಟನೆಯು ಆಯಿತು. 32 ಮಕ್ಕಳು 2 ಟೀಚರ್ ಸಮೇತ ಶಾಲೆ ಆರಂಭವಾಯಿತು. ಇಂದು 2500 ಮಕ್ಕಳು 180 Staff Members ಇದ್ದಾರೆ.

ಅತ್ಯಂತ ಪ್ರಶಾಂತ ಶಾಲೆ K. G ಯಿಂದ S.S.L.C ವರೆಗೆ ಕ್ಲಾಸ್ ಆರಂಭವಾಯಿತು. ಶಾಲೆ ಉತ್ತಮವಾಗಿ ನಡೆಯಿತು. ಅತ್ಯುತ್ತಮ ಫಲಿತಾಂಶ ಕೂಡಾ ಬರಲು ಆರಂಭವಾಯಿತು. ಮೂಡಬಿದ್ರೆಯ ಏಕೈಕ ಅಧಿಕೃತ ಇಂಗ್ಲೀಷ್ ಮೀಡಿಯಂ ಶಾಲೆ ಇದು ರಾಜ್ಯಮಟ್ಟದಲ್ಲಿ ಹೆಸರು ಪಡೆಯಿತು. 2015 ರಲ್ಲಿ ಹೆತ್ತವರ ಬೇಡಿಕೆಯಂತೆ P.U.C Block ಆರಂಭವಾಯಿತು. ಹೊಸಜಾಗದಲ್ಲಿ ನೂತನ ಕಟ್ಟಡ ಶ್ರೀ ಧರ್ಮಸ್ಥಳದ ಖಾವಂದರಾದ ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು. C.B.S.E ಕ್ಲಾಸ್ ಕೂಡಾ ಇದರಲ್ಲಿ ಆರಂಭಗೊಂಡು ಅತ್ಯುತ್ತಮ Combination ಆರಂಭವಾಯಿತು. ಅತ್ಯುತ್ತಮ ಶಾಲೆ ಎಂದು ರಾಜ್ಯಮಟ್ಟದಲ್ಲಿ ಹೆಸರು ಪಡೆಯಿತು.

ಹೊಸತು ರೊಟೇರಿಯನ್ ಆಗಿ ಎಲ್ಲಾ ಅಧ್ಯಕ್ಷರಿಗೂ ಅತ್ಯುತ್ತಮ ಸಹಾಯ ಮಾಡುತ್ತಿದ್ದರು ಅಮರಣ್ಣ. ಇನ್ನರ್‌ವೀಲ್ ಆರಂಭಗೊಳ್ಳಲು ನಾನು ರೋಟರಿ ಕ್ಲಬ್‌ನ ಸಿಲ್ವರ್ ಜ್ಯುಬಿಲಿ ಅಧ್ಯಕ್ಷನಾಗಿದ್ದಾಗ 1992ರಲ್ಲಿ ಬಹಳಷ್ಟು ಸಹಕಾರ ನೀಡಿದ್ದರು. ರೋಟರಿ ಕ್ಲಬ್ ಬಹಳ ಆತ್ಮೀಯ ಜಾಗ ಆಗಿತ್ತು. ಅಮರನಾಥ ಶೆಟ್ಟರಿಗೆ ಶಾಲೆಯ ಮೇಲೆ, ಮಕ್ಕಳ ಮೇಲೆ, ಹೆತ್ತವರ ಮೇಲೆ ಅವರ ಪ್ರೀತಿ ಬಹಳಷ್ಟು ಇತ್ತು. ಒಟ್ಟಾರೆ ಹೇಳುವುದಾದರೆ ನಮ್ಮ ರೋಟರಿ ಕ್ಲಬ್ ಅವರ ಜೀವನದ ಅವಿಭಾಜ್ಯ ಅಂಗ ಮತ್ತು ರೋಟರಿ ಅಮರಣ್ಣನವರ ಅವಿಭಾಜ್ಯ ಅಂಗವಾಗಿತ್ತು.



– ರೊ. ನಾರಾಯಣ ಪಿ. ಎಂ.





# ಸ್ವಾತಂತ್ರ್ಯದ ಸವಿಗಾನ

1947, ಆಗಸ್ಟ್ 15 ಎಲ್ಲರಿಗೂ ತಿಳಿದಿರುವಂತೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ದಿನ. ಆಗ ನನಗಿನ್ನೂ 10 ವರ್ಷ. ಕಾಸರಗೋಡು ತಾಲೂಕಿನ ಪೆರ್ಲ ಶ್ರೀ ಸತ್ಯನಾರಾಯಣ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ. ದೇಶದ ತ್ರಿವರ್ಣ ಧ್ವಜವನ್ನು ಹಾರಿಸಿ, ವಂದಿಸಿ ಸಿಹಿತಿಂಡಿಯನ್ನು ಹಂಚಿಕೊಂಡು ಸಂಭ್ರಮಿಸಿದ ದಿನ. ದಿನದ ಮಹತ್ವದ ಬಗ್ಗೆ ವಿವರಿಸಿ ತಿಳಿಸಿದರೂ ಅದರ ಪರಿಪೂರ್ಣ ಮಹತ್ವದ ಬಗ್ಗೆ ಅರಿತುಕೊಳ್ಳುವಷ್ಟು ಪ್ರಭುದ್ಧತೆ ನನಗಿನ್ನೂ ಬಂದಿರಲಿಲ್ಲ. ಈ ಸ್ವಾತಂತ್ರ್ಯ ಗಳಿಸುವುದಕ್ಕಾಗಿ ದೇಶದ ಉದ್ದಗಲಕ್ಕೂ ಲಕ್ಷಾಂತರ ಜನರು ಹೋರಾಟ ನಡೆಸಿ ಸಾವಿರಾರು ಜನರು ತಮ್ಮ ಪ್ರಾಣವನ್ನೂ ಕಳೆದುಕೊಂಡರೆಂದೂ, ಇದು ವರ್ಷಗಟ್ಟಲೆ ನಡೆದ ಚಳವಳಿಯೆಂದೂ ತಿಳಿಯಿತು. ಮಹಾತ್ಮಗಾಂಧಿಯವರ ನಾಯಕತ್ವ ಈ ಹೋರಾಟಕ್ಕೆ ಸ್ಫೂರ್ತಿಯಾಯಿತು.

ಈ ಚಳವಳಿಯಲ್ಲಿ ಸಂಪೂರ್ಣ ತೊಡಗಿಸಿಕೊಂಡ ನಮ್ಮೂರ ಮಾನ್ಯ ದೇವಪ್ಪ ಆಳ್ವರು 1932, 1941, 1942 ಹೀಗೆ ಮೂರು ಬಾರಿ ಬಂಧಿತರಾಗಿ ಜೈಲುವಾಸವನ್ನು ಅನುಭವಿಸಿದರು. ಸದಾ ಬಿಳಿ ಖಾದಿ ವಸ್ತ್ರ ಧರಿಸುತ್ತಿದ್ದ ಇವರು ಕುಂಬಳೆಯ ಗಾಂಧಿ ಎಂದು ಪ್ರಸಿದ್ಧಿ ಪಡೆದರು. ಜೈಲು ವಾಸವನ್ನು ಅನುಭವಿಸಿದ ಇನ್ನೊಬ್ಬರು ಪೆರಡಾಲ ಗಾಂಧಿ ಅನ್ನಿಸಿಕೊಂಡ ಖಂಡಿಗೆ ಕೃಷ್ಣ ಭಟ್ಟರು. ಮಂಗಳೂರು ಕಾಲೇಜಿನಲ್ಲಿ ಓದುತ್ತಿದ್ದ ನನ್ನ ಸೋದರಮಾವ ಸರ್ಪಮಲೆ ಗೋಪಾಲಕೃಷ್ಣ ಭಟ್ಟರು 1942 ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗಿಯಾಗಿ ಬಂಧಿಸಲ್ಪಟ್ಟು ಆರು ತಿಂಗಳು ಬಳ್ಳಾರಿ ಜೈಲಿನಲ್ಲಿದ್ದರು.

ಹೀಗೆ ವಿದ್ಯಾರ್ಥಿಗಳಿಂದ ತೊಡಗಿ ವೃದ್ಧರವರೆಗೆ ದೇಶದ ಜನ ಸ್ವಯಂ ಸ್ಫೂರ್ತಿಯಿಂದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದರಿಂದ ಬ್ರಿಟಿಷರು ದೇಶಬಿಟ್ಟು ತೊಲಗಬೇಕಾಯಿತು. ಆದರೆ ಈ ಹೋರಾಟದಲ್ಲಿ ಸಹಸ್ರಾರು ಜನ ಜೈಲು ವಾಸವನ್ನು ಅನುಭವಿಸಿದ್ದಲ್ಲದೆ ಅನೇಕರು ಪ್ರಾಣವನ್ನೂ ಕಳಕೊಂಡು ಹುತಾತ್ಮರಾದರು. ಹಲವಾರು ವಿಧ್ವಾಂಸರು, ಸಾಹಿತಿಗಳು ತಮ್ಮ ಬರಹ, ಭಾಷಣಗಳಿಂದ ಜನರನ್ನು ಚಳವಳಿಗೆ ಹುರಿದುಂಬಿಸಿದರು. ಕನ್ನಡ ಪಂಡಿತರಾಗಿದ್ದ ಕೈಯ್ಯಾರ ಕಿಞಣ್ಣ ರೈಗಳು ಇಂತಹವರಲ್ಲಿ ಒಬ್ಬರು.

ಜನವರಿ 30, 1948ರಂದು ಸಂಜೆ ಪೆರ್ಲದ ನಮ್ಮ ಸತ್ಯ ನಾರಾಯಣ ಹೈಸ್ಕೂಲು ಮತ್ತು ಪ್ರೈಮರಿ ಶಾಲೆಗಳ ವಾರ್ಷಿಕೋತ್ಸವ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಕಾರ್ಯಕ್ರಮ ಆರಂಭವಾಗಿ ಸ್ವಲ್ಪ ಹೊತ್ತಿನಲ್ಲಿ ರಾಷ್ಟ್ರಪಿತ ಮಹಾತ್ಮಾಗಾಂಧಿಯವರ ನಿಧನದ ವಾರ್ತೆ ಬಂದು ಎಲ್ಲರನ್ನು ದಿಗ್‌ಭ್ರಾಂತರನ್ನಾಗಿಸಿತು. ಸಮಾರಂಭವನ್ನು ಅರ್ಧಕ್ಕೆ ನಿಲ್ಲಿಸಿ ಅಗಲಿದ ಮಹಾಚೇತನಕ್ಕೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

1956ರಲ್ಲಿ ದೇಶದಲ್ಲಿ ಭಾಷಾವಾರು ಪ್ರಾಂತ ರಚನೆಯಾದಾಗ ದ.ಕ. ಜಿಲ್ಲೆಯ ಕಾಸರಗೋಡು ತಾಲೂಕು ಕೇರಳಕ್ಕೆ ಸೇರಿ ಉಳಿದ ಭಾಗ ಕರ್ನಾಟಕದ ಭಾಗವಾಯಿತು.

ಈಗ ನಾವು ಪ್ರತಿ ವರ್ಷ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆ ಹಾಗೂ ಜನವರಿ 26 ರಂದು ಗಣರಾಜ್ಯೋತ್ಸವವನ್ನು ಆಚರಿಸುತ್ತೇವೆ. ಈ ಎರಡೂ ದಿನಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸಿ ಧ್ವಜವಂದನೆಯನ್ನು ಮಾಡುತ್ತೇವೆ. ಈ ಎರಡೂ ಸಂದರ್ಭಗಳಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರನ್ನು ಹಾಗೂ ಪ್ರಾಣತ್ಯಾಗವನ್ನು ಮಾಡಿದ ಎಲ್ಲಾ ಹಿರಿಯ ಚೇತನಗಳನ್ನು ಸ್ಮರಿಸಿ ಅವರು ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ಅನುಭವಿಸುವುದರ ಜೊತೆಗೆ ದೇಶದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಸಂಕಲ್ಪ ಮಾಡೋಣ. ಹಾಗೆಯೇ ಭಾರತದ ರಕ್ಷಣೆಗಾಗಿ ಹಗಲಿರುಳು ಹೋರಾಡುವ ಹಾಗೂ ಅದಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧರಿರುವ ಸೈನ್ಯದ ಯೋಧರನ್ನು ಅತ್ಯಂತ ಗೌರವದಿಂದ ಕಾಣುವ ದೃಢ ಸಂಕಲ್ಪ ಮಾಡೋಣ.



**– ರೊ. ಜಿ. ಎನ್. ಭಟ್**

# ನೆನಪುಗಳ ಮಾತು ಮಧುರ



ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತಾಗ ನನಗೆ 5 ವರ್ಷ ವಯಸ್ಸು. ಆ ಸಂದರ್ಭವನ್ನು ನೆನಪಿಸಿಕೊಂಡಾಗ ನೆನಪಾಗುವುದು ನಮ್ಮ ತಂದೆಯವರಾದ ಶ್ರೀ ಆದಿರಾಜ ಇಂದ್ರರು ಸುಮಾರು 50ರಿಂದ 60 ಮಂದಿ ನೆರೆಕರೆಯವರನ್ನು ಪ್ರೀತಿಯಿಂದ ಮನೆಗೆ ಕರೆದು ಸಿಹಿತಿಂಡಿಗಳನ್ನು ಹಂಚಿ ಊಟವನ್ನು ಬಡಿಸಿ ಸಂಭ್ರಮಿಸಿದ ನೆನಪಿದೆ. ಆ ಸಂದರ್ಭದಲ್ಲಿ ದೇಶಕ್ಕೆ ಸ್ವಾತಂತ್ರ್ಯ ದೊರೆತ ಖುಷಿಯಲ್ಲಿ ಆನಂದಭಾಷ್ಪವನ್ನು ಸುರಿಸಿದ್ದರಂತೆ. ಸ್ವಾತಂತ್ರ್ಯ ದೊರೆತ ಬಗ್ಗೆ ವಿವರಣೆಯನ್ನು ನೀಡಿ ಜನರಲ್ಲಿ ಮತ್ತು ಮಕ್ಕಳಲ್ಲಿ ದೇಶ ಪ್ರೇಮವನ್ನು ಜಾಗೃತಗೊಳಿಸಿದ್ದರಂತೆ. ನನ್ನ ಅಣ್ಣ ಅಕ್ಕನನ್ನು ನನ್ನೊಂದಿಗೆ ಕೂರಿಸಿ ನಿಮ್ಮಮುಂದಿನ ಭವಿಷ್ಯ ಉಜ್ವಲವಾಗಿ ಬೆಳಗಲಿ ಎಂದು ಆಶೀರ್ವದಿಸಿದ್ದರಂತೆ. ಇದೆಲ್ಲಾ ಅಲ್ಪ ಸ್ವಲ್ಪ ನೆನಪು ಮಾತ್ರ.

ಭಾರತ ದೇಶದ ಭವಿಷ್ಯವನ್ನು ಉಜ್ವಲವಾಗಿ ಬದಲಾಯಿಸುವ ಸಾಮರ್ಥ್ಯ ನಮ್ಮ ಯುವ ಪೀಳಿಗೆಯ ಮೇಲಿದೆ. ಅವರಲ್ಲಿ ದೇಶ ಪ್ರೇಮವನ್ನು ಬೆಳೆಸಿ ಉತ್ತಮ ರಾಷ್ಟ್ರವನ್ನು ನಿರ್ಮಾಣಮಾಡುವಂತಾಗಲಿ ಎಂದು ಹಾರೈಸೋಣ

**– ಶ್ರಿ ಎಸ್. ಅರ್ಕಕೀರ್ತಿ ಸಿದ್ಧಕಟ್ಟೆ** (ರೋ. ಡಾ. ಸುದೀಪ್ ಕುಮಾರ್ ರವರ ತಂದೆ)

---



ನನಗಾಗ ಸುಮಾರು 15 ವರುಷ. ಮನೆಯ ಕೃಷಿ ಕೆಲಸಕ್ಕಾಗಿ ಶಾಲೆ ಬಿಟ್ಟರೂ, ನಮ್ಮ ಮನೆ ಮಿಜಾರು ಶಾಲೆಯ ಹತ್ತಿರ ಇದ್ದ ಕಾರಣ ಪ್ರಥಮ ಸ್ವಾತಂತ್ರ್ಯದ ಧ್ವಜಾರೋಹಣ ಆಚರಣೆಯಲ್ಲಿ ಮಕ್ಕಳ ಸಾಲಿನಿಂದ ಹೊರಗೆ ನಿಂತು ನೋಡುವ ಭಾಗ್ಯ ಒದಗಿತು. ಅಂದು ನೀಡಿದ ಸಿಹಿತಿಂಡಿ ಇಂದೂ ನೆನಪಿದೆ.

ಗಾಂಧೀಜಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು ಎಂದು ಕೇಳಿದ ನೆನಪು. ತುಳುವಿನಲ್ಲಿ ಇದ್ದ ಒಂದು ಹಾಡು ಅಲ್ಪ ಸ್ವಲ್ಪ ನೆನಪಿದೆ. ಗಾಂಧೀಜಿ ಪಣ್ಬುನ ಮಲ್ಲ ಜನ ಆರ್. ಸ್ವಾತಂತ್ರ್ಯಗಾದ್ ಬಂಗ ಬತ್ತೆರ್. ಆಫ್ರಿಕಾ ಪಣ್ಪಿನ ದೇಶಗ್ ಪೋದು ಜನಕುಲೆ ಕಷ್ಟೊನು ತೆರಿಯೊಂಡೆರ್......... ಎಂದು ಹಾಡುತ್ತಾ ಮೆರವಣಿಗೆ ಸಾಗುತ್ತಿತ್ತು. ಭಾರತ್ ಮಾತಾ ಕೀ ಜೈ ಎಂದು ಘೋಷಣೆ ಕೂಗುತ್ತಿದ್ದರು.

92 ರ ವಯಸ್ಸಿನಲ್ಲೂ ಈ ಸ್ವಾತಂತ್ರ್ಯ ಉತ್ಸವದ ಸಂಭ್ರಮ ವನ್ನು ನೋಡುವ ಭಾಗ್ಯ ನನ್ನದು. ಎಲ್ಲರಿಗೂ ಒಳ್ಳೆಯದಾಗಲಿ.

**– ಶೀನ ನಾಯ್ಕ್ ಮಿಜಾರು** (ರೊ. ರಾಮಚಂದ್ರ ಮಿಜಾರ್ ಅವರ ತಂದೆ)

---



1947 ಆಗಸ್ಟ್ 15, ನಾನು ಆಗ 9 ವರ್ಷದ ಹುಡುಗ. ಆಗ ಇನ್ನೂ ಶಾಲೆಗೆ ಹೋಗಲು ಪ್ರಾರಂಭಿಸಿರಲಿಲ್ಲ. ಆದರೆ ಸ್ವಾತಂತ್ರ್ಯ ಸಿಕ್ಕಿದ ದಿನ. ಇನ್ನೂ ನೆನಪಿನಲ್ಲಿ ಹಸಿಯಾಗಿಯೇ ಇದೆ. ಆ ದಿನ ನಮ್ಮ ಮನೆಯ ಮೇಲಿನಿಂದ ಒಂದು ವಿಮಾನವು 7–8 ಬಾರಿ ಹಾದು ಹೋಗುತ್ತಿತ್ತು. ನಮ್ಮ ದೂರದ ಸಂಬಂಧಿಗಳಾದ ಪಡಂಗಡಿ ಭೋಜರಾಜ ಹೆಗ್ಡೆಯವರು ಹಾಗೂ ವೇಣೂರಿನ ಧರ್ಣಪ್ಪ ಅತಿಕಾರಿಯವರು ಆ ಕಾಲದಲ್ಲಿ ಸ್ವಾತಂತ್ರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಅವರು ಸ್ವಾತಂತ್ರ್ಯದ ಮಹತ್ವದ ಬಗ್ಗೆ ಹೇಳುತ್ತಿದ್ದುದನ್ನು ನಮ್ಮ ಕೂಡು ಕುಟುಂಬದ ಮನೆಯಲ್ಲಿ ಮಾತಾಡಿಕೊಳ್ಳುತ್ತಿದ್ದುದನ್ನು ಕೇಳಿಕೊಳ್ಳುತ್ತಿದ್ದೆ. ಆ ಕಾಲದಲ್ಲಿ ಕನ್ನಡದಲ್ಲಿ ನವಭಾರತ ಪತ್ರಿಕೆಯಲ್ಲಿ ಸ್ವಾತಂತ್ರ್ಯ ಸಿಕ್ಕಿದ ಬಗ್ಗೆ ವಿವರವಾಗಿ ಬಂದಿತ್ತೆಂದು, ಅದನ್ನು ನನ್ನ ತಾಯಿ ಎಲ್ಲರಿಗೂ ಓದಿ ವಿವರಿಸಿದ್ದೆಂದು ನೆನಪು.

**ಎಂ. ಪದ್ಮರಾಜ್ ಶೆಟ್ಟಿ** ನಿವೃತ್ತ ಶಿಕ್ಷಕರು

(ರೊ. ಡಾ. ಆಶೀರ್ವಾದ್‌ರವರ ತಂದೆ)



– ರೊ. ಎಸ್. ಎನ್. ಬೋರ್ಕರ್

# ಈ ಬಂಧನ...... ರಕ್ಷಾ ಬಂಧನ

ಹಿಂದೂ (ಸನಾತನ) ಸಂಸ್ಕೃತಿಯ ಪ್ರಕಾರ ಶ್ರಾವಣ ಮಾಸದ ಹುಣ್ಣಿಮೆಯಂದು ರಕ್ಷಾಬಂಧನವನ್ನು ಆಚರಿಸಲಾಗುತ್ತದೆ. ಸಹೋದರತ್ವದ ಸಂದೇಶ ಸಾರುವ ಈ ಹಬ್ಬ ಒಂದೊಮ್ಮೆ ಉತ್ತರ ಭಾರತದಲ್ಲಿ ಜನಪ್ರಿಯವಾಗಿತ್ತು. ರಾಖಿಯನ್ನು ಸಹೋದರಿ ಸಹೋದರನಿಗೆ ಆರತಿ ಮಾಡಿ ಆತನ ಮಣಿಕಟ್ಟಿಗೆ ಕಟ್ಟುತ್ತಾಳೆ. ಪ್ರತಿಯಾಗಿ ಸಹೋದರ ತನ್ನ ಸಹೋದರಿಗೆ ಉಡುಗೊರೆಯನ್ನು ನೀಡುವುದಾಗಿರುತ್ತದೆ. ಭಾರತೀಯರು ಶ್ರಾವಣ ಮಾಸದಲ್ಲಿ ಆಚರಿಸುವ ಈ ಹಬ್ಬ ಪರಸ್ಪರ ಭ್ರಾತೃತ್ವದ ಭಾವನೆಯನ್ನು ದಟ್ಟಗೊಳಿಸುವ ಹಬ್ಬವಾಗಿದೆ.

ಒಬ್ಬ ಹುಡುಗನಿಗೆ ಅವನ ಹೆತ್ತಮ್ಮನ ನಂತರ ಹೆಚ್ಚು ಕಾಳಜಿ ವಹಿಸುವ ಹೆಣ್ಣೆಂದರೆ ಅದು ಆತನ ಸಹೋದರಿ. ಅವನಿಗೆ ತನ್ನ ಸಹೋದರಿಗಿಂತ ಉತ್ತಮ ಗೆಳತಿ ಮತ್ತೊಬ್ಬಳಿರಲಾರಳು. ಗೆದ್ದಾಗ ಬೆನ್ನು ತಟ್ಟಿ ಸೋತಾಗ ಸಾಂತ್ವಾನ ಹೇಳಿ ಜೀವನದಲ್ಲಿ ಸ್ಫೂರ್ತಿ ತುಂಬುವ ಸಹೋದರಿಯರ ಬಗ್ಗೆ ಹೇಳುತ್ತಾ ಹೋದರೆ ಪುಟಗಳೇ ಸಾಲದು. ಹೆಣ್ಣು ಮಕ್ಕಳಿಗೂ ಅಷ್ಟೇ, ಅಣ್ಣನೆಂದರೆ ಅದೆಂತಹುದೋ..... ಭದ್ರತಾಭಾವ, ಅಪರೂಪದ ಮಾರ್ಗದರ್ಶಕ. ಅಣ್ಣ–ತಂಗಿಯರ ಭಾಂಧವ್ಯವೇ ಹೀಗೆ. ಅಲ್ಲಿ ಪ್ರೀತಿ, ಸ್ವಲ್ಪ ಹೊಟ್ಟೆಕಿಚ್ಚು, ಹೊಡೆದಾಟ, ತುಂಟಾಟಗಳು ಇದ್ದಿದ್ದೇ. ಇಂತಹ ಅಣ್ಣ–ತಂಗಿಯರ ಭಾಂಧವ್ಯವನ್ನು ಮತ್ತಷ್ಟು ಗಟ್ಟಿಗೊಳಿಸುವ ಹಬ್ಬವೇ ರಕ್ಷಾಬಂಧನ.

ಇತ್ತೀಚೆಗೆ ಇದು ದೇಶದಾದ್ಯಂತ ಹಾಗೂ ಭಾರತೀಯರು ನೆಲೆಸಿರುವ ವಿಶ್ವದ ಅನೇಕ ದೇಶಗಳಲ್ಲೂ ಆಚರಿಸಲ್ಪಡುತ್ತಿದೆ. ಇದು ಧಾರ್ಮಿಕ ಹಬ್ಬಗಳಿಗಿಂತ ಭಿನ್ನವಾಗಿದೆ. ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮದ ಹಿನ್ನೆಲೆ ಹೊಂದಿರುವ ರಕ್ಷಾಬಂಧನ ಉತ್ಸವವು ಈ ನೆಲದ ಮೂಲಗುಣವಾದ ಭ್ರಾತೃತ್ವದ ಸಂದೇಶ ಸಾರುವ ವಿಶೇಷ ಹಬ್ಬ.

ಅಣ್ಣ–ತಂಗಿ, ಅಕ್ಕ–ತಮ್ಮಂದಿರ ನಡುವಿನ ಪ್ರೀತಿ ವಿಶ್ವಾಸವೇ ಈ ಹಬ್ಬದ ವಿಶೇಷತೆ. ಇದೀಗ ಇದು ಸಾಮಾಜಿಕ ಹಬ್ಬವಾಗಿ ಎಲ್ಲೆಡೆ ಆಚರಿಸಲ್ಪಡುವುದರಿಂದ ಅಣ್ಣ–ತಮ್ಮ, ಅಕ್ಕ–ತಂಗಿ ಸೇರಿದಂತೆ ವಿವಿಧ ವರ್ಗ, ಜಾತಿ, ಪ್ರಾಂತ, ಭಾಷೆ ಇತ್ಯಾದಿ ಭೇದ ಮರೆತು ಎಲ್ಲರು ಪರಸ್ಪರ ಸಂಭ್ರಮದಿಂದ ರಕ್ಷಾಬಂಧನ ಹಬ್ಬವನ್ನು ಆಚರಿಸುತ್ತಾರೆ. ಭ್ರಾತೃ ಪ್ರೀತಿಯ ದ್ಯೋತಕವಾಗಿ ರಾಖಿಯನ್ನು ಪರಸ್ಪರ ಬಲಗೈಗೆ ಕಟ್ಟುವುದು ಈ ಮೂಲಕ ಪರಸ್ಪರರನ್ನು ರಕ್ಷಿಸುವ ಮನೋಸಂಕಲ್ಪ ಮಾಡುವುದು ಈ ಹಬ್ಬದ ವಿಶೇಷ. ಅಪಾಯ ಸಂದರ್ಭಗಳಲ್ಲಿ ತಕ್ಷಣ ನೆರವಾಗಿ ರಕ್ಷಿಸುವ ಜವಾಬ್ದಾರಿ ನನ್ನದು ಎಂಬ ಹೊಣೆಗಾರಿಕೆಯ ಮನೋಭಾವನೆ ರಕ್ಷೆ ಕಟ್ಟಿಸಿಕೊಂಡವರಲ್ಲಿ ಒಡಮೂಡುತ್ತದೆ. ಹೀಗೆ ರಕ್ಷೆ ಕಟ್ಟಿದವರನ್ನು ರಕ್ಷಿಸುವ ಹೊಣೆಗಾರಿಕೆ ಅಥವಾ ಜವಾಬ್ದಾರಿಯ ಬಂಧನವನ್ನು ಸಂಕಲ್ಪಿಸುವ ಹಬ್ಬವೇ ರಕ್ಷಾಬಂದನ.

ರಕ್ಷಾಬಂಧನವು ಪ್ರಾಂತ ಜಾತಿ ಪಂಗಡಗಳನ್ನು ಮೀರಿ ನಿಂತು ಭಾರತೀಯರನ್ನೆಲ್ಲ ಒಂದಾಗಿಸುವ ಹಬ್ಬ. ಭಾರತೀಯರೆಲ್ಲರು ಸಹೋದರ ಸಹೋದರಿಯರು ಎನ್ನುವ ನಮ್ಮ ಭಾವನೆಗೆ ಇಂಬು ನೀಡುವ ಸಡಗರದ ದಿನವಿದು.

ರಕ್ಷಾಬಂಧನದ ಆಚರಣೆಯ ಹಿಂದೆ ಹಲವಾರು ಸ್ವಾರಸ್ಯಕರ ಪೌರಾಣಿಕ ಕಥೆಗಳು ನಮಗೆ ಸಿಗುತ್ತವೆ. ಹಿಂದೆ ದೇವತೆಗಳು ಮತ್ತು ರಾಕ್ಷಸರ ನಡುವೆ ಘೋರ ಯುದ್ಧ ನಡೆದಾಗಲೆಲ್ಲ ಬಲಿ ಚಕ್ರವರ್ತಿಯು ವಿಜಯ ಸಾಧಿಸುತ್ತಲೇ ಇರುತ್ತಾನೆ. ಆಗ ಇಂದ್ರನ ಪತ್ನಿಯಾದ ಶಚೀ ದೇವಿಯು ವಿಷ್ಣುವಿನ ಬಳಿ ಪ್ರಾರ್ಥಿಸಿದಾಗ ವಿಷ್ಣುವು ಹತ್ತಿಯ ದಾರಗಳಿಂದ ಕೂಡಿದ ಪವಿತ್ರ ರಕ್ಷೆಯನ್ನು ಕೊಟ್ಟು ಅದನ್ನು ಇಂದ್ರನ ಕೈಗೆ ಕಟ್ಟುವಂತೆ ಸೂಚಿಸುತ್ತಾನೆ. ಅದನ್ನು ಶಚೀದೇವಿಯು ತನ್ನ ಪತಿಯ ಕೈಗೆ ಕಟ್ಟುತ್ತಾಳೆ. ಅನಂತರ ನಡೆದ ಯುದ್ಧದಲ್ಲಿ ಇಂದ್ರನು ಅಸುರರನ್ನು ಸೋಲಿಸಿ ಅಮರಾವತಿಯನ್ನು ಮರಳಿ ಪಡೆಯುತ್ತಾನೆ. ಈ

ಕಥೆಯನ್ನು ಗಮನಿಸಿದಾಗ ರಕ್ಷಾಬಂಧನವು ಕೇವಲ ಅಣ್ಣ–ತಂಗಿಯುರಿಗೆ ಮಾತ್ರ ಸಂಬಂಧಿಸಿದಲ್ಲ ಎಂದು ತಿಳಿಯುತ್ತದೆ. ತಮ್ಮ ಪ್ರೀತಿ ಪಾತ್ರರ ರಕ್ಷಣೆಯನ್ನು ಬಯಸುವವರು ಅವರಿಗೆ ರಕ್ಷೆಯನ್ನು ಕಟ್ಟುತ್ತಿದ್ದರು. ತಾಯಿ ಮಗನಿಗೆ, ಪತ್ನಿ ಪತಿಗೆ, ಗುರು ಶಿಷ್ಯನಿಗೆ ಹೀಗೆ ಯಾರು ಬೇಕಾದರೂ ರಾಖಿಯನ್ನು ಕಟ್ಟಬಹುದಾಗಿತ್ತು. ಆದರೆ ಕಾಲಕ್ರಮೇಣ ಅದು ಸಹೋದರ–ಸಹೋದರಿಯರ ನಡುವಿನ ಹಬ್ಬವಾಗಿ ಪರಿವರ್ತನೆಗೊಂಡಿತು.

ಭ್ರಾತೃ ಪ್ರೇಮಕ್ಕೆ ಐತಿಹಾಸಕವಾಗಿ ನಮ್ಮ ತುಳುನಾಡಿನ ಅಳಿಯಕಟ್ಟು ಸಂಪ್ರದಾಯವು ಉತ್ತಮ ಉದಾಹರಣೆಯಾಗಬಲ್ಲದು. ಬಾರ್ಕೂರಿನ ಅರಸ ದೇವಪಾಂಡ್ಯನಿಗೆ ಕಷ್ಟಕಾಲದಲ್ಲಿ ತನ್ನ ಮಡದಿಯ ಬೆಂಬಲ ಸಿಗದೇ ಇರುವಾಗ ಆತನ ಸಹೋದರಿ ಸತ್ಯವತಿಯು ಅಣ್ಣನಿಗಾಗಿ ತನ್ನ ಮಗ ಭೂತಾಳಪಾಂಡ್ಯನನ್ನು ಬಲಿ ಕೊಡುವುದಾಗಿ ಹೇಳುತ್ತಾಳೆ. ಅಣ್ಣ–ತಂಗಿಯ ಭಾಂಧವ್ಯ ಹಾಗೂ ತ್ಯಾಗ ಕಂಡು ದೈವವು ಸಂಪ್ರೀತನಾಗಿ ತನಗೆ ಏನೂ ಬೇಡವೆಂದು ಹೇಳಿ ಅರಸನನ್ನು ಆ ಕಷ್ಟದಿಂದ ಪಾರುಮಾಡುತ್ತದೆ. ತಂಗಿಯ ಪ್ರೀತಿಗೆ ಮೂಕವಿಸ್ಮಿತನಾದ ದೇವಪಾಂಡ್ಯನು ತನ್ನ ನಂತರ ತನ್ನೆಲ್ಲಾ ಸಂಪತ್ತು ಸೋದರಳಿಯ ಭೂತಾಳಪಾಂಡ್ಯನಿಗೆಂದು ನಿರ್ಧರಿಸುತ್ತಾನೆ. ಮುಂದೆ ಇದೇ ಶಾಸನವಾಗಿ ಪರಿವರ್ತನೆಗೊಳ್ಳುತ್ತದೆ.

ಕವಿ ರವೀಂದ್ರನಾಥ ಠಾಗೋರರು ರಕ್ಷಾ ಬಂಧನ ಆಚರಣೆಗೆ ಹಬ್ಬದ ವಿಜ್ರಂಭನೆ ಸಿಗುವಂತೆ ಮಾಡಿದ್ದರು. 1905 ಬಂಗಾಳ ವಿಭಜನೆಯಾದಾಗ ಹಿಂದೂ ಮುಸ್ಲಿಂರ ನಡುವೆ ಭ್ರಾತೃತ್ವ ಹೆಚ್ಚಿಸುವುದಕ್ಕಾಗಿ “ರಾಖಿ ಮಹೋತ್ಸವ” ಆಚರಣೆಗೆ ತಂದರು.

ವಿದ್ಯಾಭ್ಯಾಸ, ಉದ್ಯೋಗದ ನಿಮಿತ್ತ ಸಹೋದರ ಸಹೋದರಿಯರು ಬಹುದೂರ ಇರುತ್ತಾರೆ. ಹೀಗಾಗಿ ಅನೇಕ ಸಹೋದರಿಯರು ಅಂಚೆಯ ಮೂಲಕ ತನ್ನ ಸಹೋದರನಿಗೆ ರಾಖಿ ಕಳುಹಿಸುವುದುಂಟು. ರಕ್ಷಾಬಂಧನ ಬರೀ ಒಂದು ಆಚರಣೆಯಲ್ಲ. ಅದು ಸಂಬಂಧಗಳನ್ನು ಬೆಸೆಯುವ ಭವಿಷ್ಯದ ಭರವಸೆಯ ಆಶಾಕಿರಣವನ್ನು ಮೂಡಿಸುವ ಹಬ್ಬ.

**ರಕ್ಷೆ ಸ್ನೇಹದ ಸಂಕೇತ**
**ಸಹಕಾರದ ಸಂಕೇತ**
**ಸ್ವಾಭಿಮಾನದ ಸಂಕೇತ**

**ಸ್ನೇಹ ಸಹಕಾರ ಸ್ವಾಭಿಮಾನದಿಂದ ಬಾಳೋಣ**
**ಭ್ರಾತೃತ್ವ ಬೆಸೆಯೋಣ**
**ರಾಷ್ಟ್ರರಕ್ಷಣೆಗೆ ಮುಂದಾಗೋಣ.**



*Sinchana and Sajan*



*Samanvi and Samarth*



*Sharanya and Shashank*



*Rushil Jain and Charvi Jain*



*Anshi and Advai U Salian*



*Dharithri and Vimarsha*



*Namish and Swasthika*

## Installation Ceremony of Innerwheel Club of Moodbidri




## Installation Ceremony of Rotaract Club of Moodbidri



## Secretary's Report Highlights

Installation Ceremony of the new president and other office bearer's of our club for the year 2024-25 was held on 08/07/2024.

The installation function was held at Paradise Hall Nishmitha Towers Moodubidire.

During the function the following projects have been taken up.

**1.Vocational Service.** – An Ex-Service man Mr. Ramachandra naik has been felicitated by us. He served in the Indian Army till his retirement age and was a Subedar Major.

**2.Community Service :** - we have visited an old age home in Maroor Village where 20 old age People were taken care of by one Mr. Honnoyya, we have provided a Food Grinder and a Gas Stove to the said old age home costing Rs. 15,000/-.

**3.Youth Service :** we have falicitated 3 students Top Scorers in SSLC From Govt. Kannda Medium Highschool Neerkere.



We have paid Cash of Rs. 1000/- each and Books worth Rs. 300 each.

We have honored a student from Aliyoor Kannada Medium Govt. Highschool. He was a Top Scorer in SSLC and we have paid cash of Rs. 1000/- and Books Worth Rs. 300/-.

We have honored a Top scorer in SSLC from Pranthya Kannada Medium Govt. High School, Moodubidire.

We have paid Cash Prize of Rs. 1000/- and Book of worth Rs. 300/-.

**4. TRF** - We honored 4 members of our club who have secured PHF Honor recently due to they are contribution to TRF.

We feel proud to state that 25 Rotarians of our club are nominated for the Rotary District Board for the year 2024-25.

**- Rtn. K.Rathnakar Jain**
Secretary









# ROTA QUIZ - 02



Prepared by:
**Rtn. A M Kumar**




## Note:

- Please submit your answers to the QR code provided within 48 hours of the bulletin's release.
- Good luck with the quiz!
- One lucky winner will receive a surprise gift at the next dinner meeting...

**Questions :**

1. Who introduced Rotary to its Motto?
2. What was the 100 year update of The Rotary Foundation called?
3. What are the three Thrusts of the current RI Strategic Plan?
4. What does the second object of Rotary encourage and foster?
5. What does the acronym RYPEN stand for and what is the age range for RYPEN participation?

Scan this QR code to initiate a direct WhatsApp message

Winner of the Last Month's ROTA QUIZ 1

**Dr. Seema Sudeep**

## ಮನದ ಮಾತು




ಜುಲೈ ತಿಂಗಳ ರೋಟಾದ್ರಿ ವಿಭಿನ್ನ ಪರಿಕಲ್ಪನೆಯೊಂದಿಗೆ ಸುಂದರವಾಗಿ ಮೂಡಿಬಂದಿದೆ.
ಮರೆಯಲಾರದ ಮಾಣಿಕ್ಯ ಒಂದು ಒಳ್ಳೆಯ ಲೇಖನ. ಸಂಚಿಕೆಗಳು ಹೀಗೆಯೇ ಮೂಡಿಬರಲಿ.

– ರೊ। ದಯಾನಂದ ಮಲ್ಯ

## Reader Opinion

The recent edition of Rotadri came out very well. The content was very fresh with an artistic approach and made it enjoyable to read. Hoping to see more of such content in the future editions.

- Rtn. Hazdulla Ismail

## Happy Wedding Anniversary

- Rtn. Srinath Bhat - 20th August
- Rtn. Dr. Aravind Kini - 21st August
- Rtn. Pawan Pai - 30th August

## Reader Feedback

The first issue of Rotadri shown new identity and came out with local flavour. I appreciate new column remembering of Past hero's of Rotary . We'll keep it up

- Rtn. J W Pinto

## HAPPY BIRTHDAY

- Rtn. Rajesh Mendes - 1st August
- Rtn. Gerald D'coasta - 3rd August
- Rtn. Dr. Samarth Bhat - 3rd August
- Rtn. Nagraj B - 5th August
- Rtn. Dr. Krishnaraj K - 5th August
- Rtn. Mohammad Ali Abbas - 28th August
- Rtn. J.W. Pinto - 28th August




Rtn Shrikanth Kamath

Tel : 08258 - 267365
267295,267855
Cell : 97407 68235

# Sri Navadurga Industries

Sacheri pete
Karkala Taluk, Udupi Dist. - 576121

Email : navadurgabvk@yahoo.com
Web : www.navadurgabvk.com



**Rtn. DR RAMESH**

M.B.B.S., D.G.O., D.N.B. M.N.A.M.S.
*Gynecologist & Sonologist*

# RATHNA WOMEN'S CLINIC & SCANNING CENTRE

1st Floor, Lavantha Complex New Bus Stand,
Moodubidire - 574227

**For Appointment:**
**08258-261158, Mob.: 7349163559**

**Timings: 10:00 a.m. to 1:00 p.m. 4:00 p.m. to 6:00 p.m.**
**Sunday Holiday**


To,

Book Post